350 ಕೋಟಿ ಬೇಕು, ರಾಜ್ಯ ಸರ್ಕಾರದವರು ನಾವು ಮಾತನಾಡುತ್ತಿದ್ದೇವೆ. ಅದನ್ನು ಮತ್ತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಬರಲಿಲ್ಲ ಎಂದರೆ ರಾಜ್ಯ ಸರ್ಕಾರದಿಂದ ಉಳಿದಂಥ ಹಣವನ್ನು ಕೊಡಬಹುದು.

ಅಧ್ಯಕ್ಷರು:– ಈಗ ತಾವು ಒಂದು ಕೆಲಸ ಮಾಡಿ. ಅವರನ್ನು ಕಟ್ಟಿಕೊಂಡು ಕಾಯಬೇಡಿ. ನಿಮಗೆ ಕೊಡಬೇಕೆಂದು ಪಾಲಿಸಿ ಇದೆಯೋ ಅದರ ಪ್ರಕಾರ ಕೊಟ್ಟು ಬಿಸಾಕಿ ಬಿಡಿ.

ಶ್ರೀ ಶೀನಿವಾಸ ವಿ. ಪ್ರಸಾದ್:– ಕೇಳುವುದು ನಮ್ಮ ಕರ್ತವ್ಯ ಅಲ್ಲವೆ?

ಅಧ್ಯಕ್ಷರು:– ಅದನ್ನು ಕೇಳ್ರಿ, ಬಂದರೆ additional ಆಗಿ ಕೊಡಿ.

ಶ್ರೀ ಶೀನಿವಾಸ ವಿ. ಪ್ರಸಾದ್:– ಕೊಡದೇ ಹೋದರೆ, ನಾವು ಆಲಿಕಲ್ಲು ಮಳೆಗೆ ಕೇಳಿದ್ದು. ಕೊಟ್ಟಿದ್ದು 81 ಕೋಟಿ. ರಾಜ್ಯ ಸರ್ಕಾರ 250 ಕೋಟಿ ಕೊಟ್ಟಿದೆಯಲ್ಲ.

ಅಧ್ಯಕ್ಷರು:– ಅವರು ಕೊಡಬಹುದು ಬಿಡಬಹುದು, ಕಾನೂನು ಏನಿಲ್ಲ.

ಶ್ರೀ ಶೀನಿವಾಸ ವಿ. ಪ್ರಸಾದ್:– ನಾನು ಅದನ್ನೇ ಹೇಳುತ್ತಿರುವುದು. ಕೇಂದ್ರ ಸರ್ಕಾರಕ್ಕೆ ಮನವಿ ಕೊಟ್ಟು ಕೇಳುವುದು ನಮ್ಮ ಕರ್ತವ್ಯ ಅದರಂತೆ ನಾವು ಕೇಳಿದ್ದೇವೆ. ಇಲ್ಲವೆಂದರೆ ರಾಜ್ಯ ಸರ್ಕಾರದವರು ಕೊಡುತ್ತೇವೆ.

ಅಧ್ಯಕ್ಷರು:– ನೀವು ಕೊಡುವುದಿದ್ದರೆ ಕೊಟ್ಟು ಬಿಡಿ. ಆಯಿತು ಬಿಡಿ. ಬಸವರಾಜ್ ಬೊಮ್ಮಾಯಿ ಕೇಳಿ.

2. ವಿಷಯ: ನದಿ ನೀರಿನ ಹಂಚಿಕೆಯಿಂದಾಗುವ ಪರಿಣಾಮದ ಬಗ್ಗೆ.

ಶ್ರೀ ಬಸವರಾಜ್ ಬೊಮ್ಮಾಯಿ (ಶಿಗ್ಗಾಂವಿ):– ಅಧ್ಯಕ್ಷರೆ, ಕೇಂದ್ರ ಸರ್ಕಾರವು ತೆಲಂಗಾಣ ಮತ್ತು ಸೀಮಾಂಧ್ರ ರಾಜ್ಯಗಳ ರಚನೆಯ ಸಂದರ್ಭದಲ್ಲಿ ಹೊರಡಿಸಿರುವ ಕಾನೂನಿನಲ್ಲಿ, ಕೃಷ್ಣಾ ನದಿ ನೀರಿನ ಹಂಚಿಕೆಯಲ್ಲಿ ಕರ್ನಾಟಕದ ಮೇಲೆ ಆಗುವ ಪರಿಣಾಮ ಹಾಗೂ ಕೃಷ್ಣಾ

ಟ್ರಿಬ್ಯೂನಲ್–2ರಲ್ಲಿ ಒಳಗೊಂಡಿರುವಂಥ ಆದೇಶಗಳ ಕಾನೂನಿನ ಸ್ಥಿತಿ ಗತಿಗಳ ಬಗ್ಗೆ ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಯ ವಿಷಯದಲ್ಲಿ ಎರಡು ಭಾಗಗಳಿರುತ್ತವೆ. ಮೊದಲನೆಯ ಭಾಗದಲ್ಲಿ ಆಂಧ್ರಪ್ರದೇಶ ರಾಜ್ಯದ ಪುನರ್ವಿಂಗಡಣೆಯಿಂದ ಉದ್ಭವಿಸುವ ಪರಿಣಾಮಗಳ ಬಗ್ಗೆ ಇರುತ್ತದೆ. ಎರಡನೆ ಭಾಗದಲ್ಲಿ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ ದಿನಾಂಕ:30.12.2010ರ ವರದಿ ಹಾಗೂ ದಿನಾಂಕ:29.11.2013ರ ಮುಂದುವರೆದ ವರದಿಯಲ್ಲಿ ಮಾಡಿದ ಹಂಚಿಕೆಗಳ ಅನುಷ್ಠಾನದ ಕುರಿತು ಇರುತ್ತದೆ.

ಆಂಧ್ರಪ್ರದೇಶ ರಾಜ್ಯದ ಪುನರ್ವಿಂಗಡಣೆಯಿಂದ ಉದ್ಭವಿಸುವ ಪರಿಣಾಮಗಳು:

2. ಮೊದಲು ಅಸ್ತಿತ್ವದಲ್ಲಿದ್ದ ಆಂಧ್ರಪ್ರದೇಶ ರಾಜ್ಯವನ್ನು ಪುನರ್ವಿಂಗಡಿಸಲು ಹಾಗೂ ಇದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ, ಆಂಧ್ರಪ್ರದೇಶ ಪುನರ್ವಿಂಗಡಣಾ ಕಾಯಿದೆ–2014 ಅನ್ನು ಸಂಸತ್ತು ಜಾರಿಗೊಳಿಸಿತು.

3. ಅಸ್ತಿತ್ವದಲ್ಲಿದ್ದ ಆಂಧ್ರಪ್ರದೇಶ ರಾಜ್ಯದ ಪುನರ್ವಿಂಗಡಣೆಯನುಸಾರ 02.06.2014ರಿಂದ ಜಾರಿಗೆ ಬರುವಂತೆ ಉತ್ತರಾಧಿಕಾರ ರಾಜ್ಯಗಳಾದ ತೆಲಂಗಾಣ (ಸೆಕ್ಷನ್–3) ಹಾಗೂ ಆಂಧ್ರಪ್ರದೇಶ (ಸೆಕ್ಷನ್–4) ಅಸ್ತಿತ್ವಕ್ಕೆ ಬಂದವು.
4. 2014ರ ಕಾಯಿದೆಯ ಭಾಗ VIರಲ್ಲಿ ಅಸ್ತಿತ್ವದಲ್ಲಿದ್ದ ಆಂಧ್ರಪ್ರದೇಶ ರಾಜ್ಯದ ಆಸ್ತಿ ಮತ್ತು ಹೊಣೆಯನ್ನು ಉತ್ತರಾಧಿಕಾರ ರಾಜ್ಯಗಳಾದ

ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ನಡುವೆ ಹಂಚಿಕೆ ಮಾಡಲು ಅವಕಾಶವಿರುತ್ತದೆ. ಸೆಕ್ಷನ್ 84ರಿಂದ 92ರವರೆಗೆ ಭಾಗ IX ಜಲಸಂಪನ್ಮೂಲ ನಿರ್ವಹಣೆ ಹಾಗೂ ಅಭಿವೃದ್ಧಿ ಕುರಿತದ್ದಾಗಿರುತ್ತದೆ.

5. ಆಂಧ್ರಪ್ರದೇಶ ರಾಜ್ಯಕ್ಕೆ ಹಂಚಿಕೆಯಾಗಿರುವ ಜಲಸಂಪನ್ಮೂಲದಲ್ಲಿ, ಉತ್ತರಾಧಿಕಾರ ರಾಜ್ಯಗಳಾದ ತೆಲಂಗಾಣ ಮತ್ತು ಆಂಧ್ರಪ್ರದೇಶಗಳಿಗೆ ಜಲಸಂಪನ್ಮೂಲದ ಹಂಚಿಕೆಗಾಗಿ ವ್ಯವಸ್ಥೆ ಒದಗಿಸುವುದು ಜಲಸಂಪನ್ಮೂಲದ ನಿರ್ವಹಣೆ ಹಾಗೂ ಅಭಿವೃದ್ಧಿ ಕುರಿತ ಭಾಗ IXರ ಧ್ಯೇಯವಾಗಿರುತ್ತದೆ.

(ಅ) ಸೆಕ್ಷನ್ 85(1)ರಡಿ ಸ್ಥಾಪಿಸಲಾದ, ಗೋದಾವರಿ ನದಿ ನಿರ್ವಹಣಾ ಮಂಡಳಿಯ ಹಾಗೂ ಕೃಷ್ಣಾ ನದಿ ನಿರ್ವಹಣಾ ಮಂಡಳಿಯ ಕಾರ್ಯಚರಣೆಯ ಮೇಲ್ವಿಚಾರಣೆಗಾಗಿ ಅಗ್ರ ಪರಿಷತ್ತು ಸ್ಥಾಪನೆಗೆ ಸೆಕ್ಷನ್ 84(1)ರಲ್ಲಿ ಉದ್ದೇಶಿಸಲಾಗಿದೆ.

(ಆ) 11ನೇ ಷೆಡ್ಯೂಲ್‌ನೊಂದಿಗೆ ಓದಿಕೊಂಡಂತೆ, ಸೆಕ್ಷನ್ 86ರಿಂದ 88ರವರೆಗಿನ ಅವಕಾಶಗಳಲ್ಲಿ ಸದರಿ ಮಂಡಳಿಗಳ ಕಾರ್ಯಚರಣೆ ಹಾಗೂ ವ್ಯಾಪ್ತಿಯನ್ನು ವಿವರಿಸಲಾಗಿದೆ.

(ಇ) ಕ್ಲಾಸ್ (a) ಮತ್ತು (b)ಗಳಲ್ಲಿ ಸೂಚಿಸಿರುವ ಚರ್ಚಾಂಶಗಳನ್ನು ತೀರ್ಮಾನಿಸಲು ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ (ಎರಡನೇ ನ್ಯಾಯಾಧಿಕರಣ)ದ ಅವಧಿಯ ವಿಸ್ತರಣೆಗಾಗಿ ಸೆಕ್ಷನ್ 89 ಅವಕಾಶ ನೀಡಿದೆ. ಕಾಯ್ದೆ ಸೆಕ್ಷನ್ 89 ಈ ಕೆಳಕಂಡಂತಿದೆ:

> 89. The term of the Krishna Water Disputes Tribunal shall be extended with the following terms of reference, namely:-
>
> (a) shall make project-wise specific allocation, if such allocation have not been made by a

Tribunal constituted under the Inter-State River Water Disputes Act, 1956;

(b) shall determine an operation protocol for project-wise release of water in the event of deficit flows.

Explanation For the purposes of this section, it is clarified that the project specific awards already made by the Tribunal on or before the appointed day shall be binding on the successor States.

(ಈ) ಪೊಲ್ಲಾವರಂ ನೀರಾವರಿ ಯೋಜನೆಯನ್ನು ಒಂದು "ರಾಷ್ಟ್ರೀಯ ಯೋಜನೆ" ಎಂದು ಘೋಷಿಸಿ ಹಾಗೂ ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯ ತೀರುವಳಿಗಳಿಗೆ ಒಳಪಟ್ಟಂತೆ ಸೆಕ್ಷನ್ 90 ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹೊರಿಸಿದೆ.

(ಉ) ತುಂಗಭದ್ರಾ ಮಂಡಳಿಯಲ್ಲಿ ಉತ್ತರಾಧಿಕಾರ ರಾಜ್ಯಗಳಾದ ತೆಲಂಗಾಣ ಮತ್ತು ಆಂಧ್ರಪ್ರದೇಶಗಳ ಪ್ರತಿನಿಧಿತ್ವಕ್ಕಾಗಿ ಸೆಕ್ಷನ್ 91(1)ರಲ್ಲಿ ಅವಕಾಶವಿದೆ ಹಾಗೂ ಸೆಕ್ಷನ್ 91(2)ರಲ್ಲಿ (ಆಂಧ್ರ ಕಾಯಿದೆ, 1953 ಅಡಿಯಲ್ಲಿ ಸ್ಥಾಪಿತವಾದ) ತುಂಗಭದ್ರಾ ಮಂಡಳಿಯು "ಮೇಲ್ಮಟ್ಟದ ಕಾಲುವೆ, ಕೆಳಮಟ್ಟದ ಕಾಲುವೆ ಮತ್ತು ರಾಜೋಳಿಬಂಡ ತಿರುವು ಯೋಜನೆಗಳಿಗೆ ನೀರನ್ನು ಹರಿಸಲು ಉಸ್ತುವಾರಿಯನ್ನು ಮುಂದುವರೆಸಲು" ಅಧ್ಯಾದೇಶವಿರುತ್ತದೆ.

6. ಕಂಡಿಕೆ 89ರ ಉಪಬಂಧಗಳನ್ನು ಜಾರಿಗೊಳಿಸಲು ಕೃಷ್ಣಾ ಜಲ ವಿವಾದ ನ್ಯಾಯಮಂಡಳಿಯ ಅವಧಿಯನ್ನು 01.08.2014ರಿಂದ

ಎರಡು ವರ್ಷಗಳಿಗೆ ವಿಸ್ತರಿಸಿ, ಕೇಂದ್ರ ಸರ್ಕಾರವು 15.05.2014ರಂದು ಅಧಿಸೂಚನೆ ಹೊರಡಿಸಿದೆ.

7. ಭಾಗ XIIರ ಸೆಕ್ಷನ್ 107ರಲ್ಲಿನ ಉಪಬಂಧವು, 2014ರ ಕಾಯ್ದೆಯಲ್ಲಿನ ಅವಕಾಶಗಳು ಬೇರಾವುದೇ ಕಾನೂನನ್ನು ಮೀರುವ ಪರಿಣಾಮ ಹೊಂದಿದೆ ಎಂದು ಘೋಷಿಸುತ್ತದೆ.

8. 2014ರ ಕಾಯ್ದೆಯ ಭಾಗ IXರೊಂದಿಗೆ ಭಾಗ XIIರ ಕಂಡಿಕೆ 107ರಲ್ಲಿನ ಉಪಬಂಧಗಳನ್ನು ಓದಲ್ಪಟ್ಟು, ಜಾಗರೂಕತೆಯಿಂದ ಪರಿಗಣಿಸಿದ್ದು, ಕೆಳಕಂಡ ಕಾನೂನಾತ್ಮಕ ಅಂಶಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿದೆ:

(i) "ಅಸ್ತಿತ್ವದಲ್ಲಿರುವ ಆಂಧ್ರಪ್ರದೇಶ ರಾಜ್ಯದ ಪುನಸ್ಸಂಘಟನೆ ಮತ್ತು ತತ್ಸಂಬಂಧಿತ ವಿಷಯಗಳು" 2014ರ ಕಾಯಿದೆಯ ಉದ್ದೇಶವಾಗಿರುವುದರಿಂದ, ಕರ್ನಾಟಕ ರಾಜ್ಯವನ್ನೊಳಗೊಂಡಂತೆ ಇತರೆ ರಾಜ್ಯಗಳ ಹಕ್ಕು ಮತ್ತು ಹಿತಾಸಕ್ತಿಗೆ ಬಾಧೆಯುಂಟಾಗುವುದಿಲ್ಲ.

(ii) ಕಂಡಿಕೆ 85 (8)(a)(i)ರನ್ವಯ ಗೋದಾವರಿ ನದಿ ನಿರ್ವಹಣಾ ಮಂಡಳಿ ಅಥವಾ ಕೃಷ್ಣಾ ನದಿ ನಿರ್ವಹಣಾ ಮಂಡಳಿಯು (ಆಂಧ್ರಪ್ರದೇಶ ಪುನರ್ವಿಂಗಡಣಾ ಕಾಯಿದೆ 2014ರ ಅಡಿಯಲ್ಲಿ ರಚಿತವಾದಾಗ) ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–I (1976), ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–II (2010 ಮತ್ತು 2013), ಗೋದಾವರಿ ನ್ಯಾಯಾಧಿಕರಣ (1979) ಅಂತರ ರಾಜ್ಯ ಜಲ ವಿವಾದ ಕಾಯಿದೆ 1956ರ ಅಡಿಯಲ್ಲಿ ಈಗಾಗಲೇ ಹೊರಡಿಸಿರುವ ಐ ತೀರ್ಪುಗಳಿಗೆ 'ಮನ್ನಣೆ ನೀಡಿ', (ಅವುಗಳನ್ವಯ) ಉತ್ತರಾಧಿಕಾರ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿ ನೀರಿನ ಪೂರೈಕೆಯನ್ನು ನಿಯಂತ್ರಿಸಬೇಕಾಗಿರುತ್ತದೆ.

(iii) ಸೆಕ್ಷನ್ 89ರ ಕ್ಲಾಸ್ (a) ಮತ್ತು (b)ಗಳಿಂದ ಉತ್ತರಾಧಿಕಾರ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತೆಲಂಗಾಣ ನಡುವೆ ಉದ್ಭವಿಸುವ ವಿವಾದಾಂಶಗಳನ್ನು ಇತ್ಯರ್ಥಗೊಳಿಸಲು, ಸೆಕ್ಷನ್‌ಗೆ ನೀಡಿರುವ

ವಿವರಣೆಯಲ್ಲಿ ಸ್ಪಷ್ಟೀಕರಿಸಿರುವಂತೆ, ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ ಕಾಲಾವಧಿಯನ್ನು 15.05.2014ರ ಅಧಿಸೂಚನೆಯಲ್ಲಿ ವಿಸ್ತರಿಸಲಾಗಿದೆ.

(iv) ಕೃಷ್ಣಾ ಜಲ ನಿರ್ಣಯ ಅನುಷ್ಠಾನ ಮಂಡಳಿಯು ಕಾರ್ಯಾರಂಭ ಮಾಡಿದಾಗ (ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣವು 29.11.2013ರಂದು ಹೊರಡಿಸಿರುವ ಪರಿಷ್ಕೃತ ಅಂತಿಮ ಆದೇಶದ ಕ್ಲಾಸ್ XIVರಲ್ಲಿ ಸೂಚಿಸಿರುವಂತೆ) ತುಂಗಭದ್ರಾ ಮಂಡಳಿಯು ರದ್ದಾಗುವುದರಿಂದ, ಮೇಲ್ಮಟ್ಟದ ಕಾಲುವೆ, ಕೆಳಮಟ್ಟದ ಕಾಲುವೆ ಮತ್ತು ರಾಜೋಳಿಬಂಡ ತಿರುವು ಯೋಜನೆಗಳಿಗೆ ನೀರು ಹರಿಸುವ ಉಸ್ತುವಾರಿಯನ್ನು ತುಂಗಭದ್ರಾ ಮಂಡಳಿಯು ನೋಡಿಕೊಳ್ಳಲು ಸೆಕ್ಷನ್ 91(2)ರಲ್ಲಿ ಕಲ್ಪಿಸಿರುವ ಅವಕಾಶವು ತಾತ್ಕಾಲಿಕವಾಗಿರುತ್ತದೆ.

9. ಕೇಂದ್ರ ಸರ್ಕಾರದ ದಿನಾಂಕ:15.05.2014ರ ಅಧಿಸೂಚನೆಯನ್ವಯ ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣವು ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳಿಗೆ ನೋಟೀಸ್ ಜಾರಿ ಮಾಡಿತು. ಸೆಕ್ಷನ್ 89ರ ಕುರಿತು ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತ ರಾಜ್ಯಗಳು ಪ್ರತಿಕ್ರಿಯೆ, ಉತ್ತರ ಮತ್ತು ಪ್ರತ್ಯುತ್ತರಗಳನ್ನು ಸಲ್ಲಿಸಿವೆ. ಸೆಕ್ಷನ್ 89ರ ವ್ಯಾಪ್ತಿಯು ಉತ್ತರಾಧಿಕಾರ ರಾಜ್ಯಗಳಾದ ತೆಲಂಗಾಣ ಹಾಗೂ ಆಂಧ್ರಪ್ರದೇಶಗಳಿಗೆ ಮಾತ್ರ ಸೀಮಿತವಾಗುವುದೆಂದು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಸ್ಪಷ್ಟವಾದ ಹಾಗೂ ನಿಖರವಾದ ನಿಲುವನ್ನು ತಮ್ಮ ವಾದಗಳಲ್ಲಿ ಹೊಂದಿವೆ. ಆದಾಗ್ಯೂ, ತೆಲಂಗಾಣ ಹಾಗೂ ಆಂಧ್ರಪ್ರದೇಶ ರಾಜ್ಯಗಳು, ಕರ್ನಾಟಕ ಹಾಗೂ ಮಹಾರಾಷ್ಟ್ರಕ್ಕೂ ಸೆಕ್ಷನ್ 89 ವಿಸ್ತರಿಸುತ್ತದೆಂಬ ನಿಲುವನ್ನು ತೆಗೆದುಕೊಂಡಿವೆ.

10. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣವು ತನ್ನ ದಿನಾಂಕ:27.11.2014ರ ಆದೇಶದಲ್ಲಿ, ಸೆಕ್ಷನ್ 89ರ ವ್ಯಾಪ್ತಿಯ

ಕುರಿತು ಪರಿಗಣನೆಗಾಗಿ ವಿಷಯಗಳನ್ನು ದಿನಾಂಕ:07.01.2015ಕ್ಕೆ ನಿಗದಿಯಾಗಿರುವ ಮುಂದಿನ ಕಲಾಪದಲ್ಲಿ, ಸಲ್ಲಿಸುವಂತೆ ರಾಜ್ಯಗಳಿಗೆ ನಿರ್ದೇಶಿಸಿತ್ತು. ಕಣಿವೆ ರಾಜ್ಯಗಳ ವಕೀಲರುಗಳ ಮಂಡನೆಗಳನ್ನು ಆಲಿಸಿದ ನಂತರ ನ್ಯಾಯಾಧಿಕರಣವು ದಿನಾಂಕ:07.01.2015ರ ತನ್ನ ಆದೇಶದಲ್ಲಿ 9 ಚರ್ಚಾಂಶಗಳನ್ನು ರೂಪಿಸಿದೆ. ಈ 9 ಚರ್ಚಾಂಶಗಳಲ್ಲಿ ಚರ್ಚಾಂಶ 3 ಹಾಗೂ 4 ಈ ಕೆಳಕಂಡಂತಿವೆ:

"3) Is the Reference made by the Central Government on 15.05.2014 under Section 89 of the Andhra Pradesh Reorganisation Act, 2014 limited only to the project-wise specific allocations which have not already been made by the Tribunal in the area of undivided former State of Andhra Pradesh, and operational protocol for project-wise release of water in the event of deficit flows from projects in the areas of successor States of Andhra Pradesh and Telangana only?

4) Whether the scope of inquiry into the terms of reference under Section 89 of Andhra Pradesh Reorganisation Act encompasses all the four States of Maharashtra, Karnataks, Telangana and Andhra Pradesh or only the two successor State of Andhra Pradesh and Telangana

11. ಕಣಿವೆ ರಾಜ್ಯಗಳಿಗೆ ಮಾಡಿರುವ ಯೋಜನಾವಾರು ಹಂಚಿಕೆಯಲ್ಲಿ ಯಾವುದೇ ಬದಲಾವಣೆ ಮಾಡದೇ ಉತ್ತರಾಧಿಕಾರ ರಾಜ್ಯಗಳ ಹಂಚಿಕೆ ಬಗ್ಗೆ ನ್ಯಾಯಾಧಿಕರಣವು ನಿರ್ಣಯ ತೆಗೆದುಕೊಳ್ಳಬೇಕಾಗಿದೆ ಎಂದು ಸ್ಪಷ್ಟೀಕರಣ ನೀಡುತ್ತಾ, ಕೇಂದ್ರ ಜಲ ಸಂಪನ್ಮೂಲ ಸಚಿವಾಲಯವು, ದಿನಾಂಕ 25.08.2014ರ ಪತ್ರದಲ್ಲಿ ರಿಜಿಸ್ಟ್ರಾರ್, ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ–ಖಖ ರವರಿಗೆ ತಿಳಿಸಿದೆ, ಪತ್ರದಲ್ಲಿನ ಸಂಬಂಧಿಸಿದ ಕಂಡಿಕೆಯ ಈ ಕೆಳಕಂಡಂತಿದೆ:

"2, It is thus, implicit that the Hon'ble Tribunal is to determine share of the successor States of Telangana and residual State of Andhra Pradesh as a result of reorganization of the erstwhile State of Andhra Pradesh, without disturbing the project-wise allocation done for other party States."

ಕೇಂದ್ರ ಸರ್ಕಾರವು ಸದರಿ ಪತ್ರವನ್ನು ಸಮರ್ಥಿಸಿಕೊಳ್ಳಲು ಶಪಥ ಪತ್ರವನ್ನು ನ್ಯಾಯಾಧಿಕರಣಕ್ಕೆ ಸಲ್ಲಿಸಿರುವುದಿಲ್ಲ.

ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ ದಿನಾಂಕ:30.12.2010ರ ವರದಿ ಹಾಗೂ ದಿನಾಂಕ:29.11.2013ರ ಮುಂದುವರೆದ ವರದಿಯಲ್ಲಿ ಮಾಡಿದ ಹಂಚಿಕೆಗಳ ಅನುಷ್ಠಾನ:

12. ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣದ (ಎರಡನೆ ನ್ಯಾಯಾಧಿಕರಣದ) 30.12.2010ರ ವರದಿ ಹಾಗೂ 29.11.2013ರ ಮುಂದುವರೆದ ವರದಿಗಳಲ್ಲಿ, ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ (ಮೊದಲನೆ ನ್ಯಾಯಾಧಿಕರಣ)ವು ಹಂಚಿಕೆ ಮಾಡಿರುವ 2130 ಟಿಎಂಸಿಗಿಂತ ಹೆಚ್ಚಾಗಿರುವ ನೀರು ಹಂಚಿಕೆಯಾಗಿದೆ. ಆದರೆ, ಈ ವರದಿ ಹಾಗೂ ಮುಂದುವರೆದ ವರದಿಗಳು, ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ವಿಶೇಷ ಮನವಿ ಅರ್ಜಿಗಳ ವಿಷಯಗಳಾಗಿರುತ್ತವೆ. ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳು 30.12.2010ರ ವರದಿ ಹಾಗೂ 29.11.2013ರ ಮುಂದುವರೆದ ವರದಿಗಳನ್ನು ಪ್ರಶ್ನಿಸಿ ತಲಾ ಎರಡು ವಿಶೇಷ ಮನವಿ ಅರ್ಜಿಗಳನ್ನು ಸಲ್ಲಿಸಿವೆ. ಕರ್ನಾಟಕವೂ ಸಹ ಮುಂದುವರೆದ ವರದಿಯನ್ನು ಪ್ರಶ್ನಿಸಿ ವಿಶೇಷ ಮನವಿ ಅರ್ಜಿಯನ್ನು ಸಲ್ಲಿಸಿದೆ. ವಿಶೇಷ ಮನವಿ ಅರ್ಜಿಗಳು ಬಾಕಿ ಇರುವಾಗಲೇ, ಅಂತರ ರಾಜ್ಯ ನದಿ ಜಲ ವಿವಾದ ಕಾಯಿದೆ 1956ರ ಸೆಕ್ಷನ್ 6(1)ರಡಿಯಲ್ಲಿ ನಿರ್ಣಯವನ್ನು ಪ್ರಕಟಿಸುವಂತೆ ಕೋರಿ ಮಹಾರಾಷ್ಟ್ರ ರಾಜ್ಯವು ಮಧ್ಯಕಾಲೀನ ಅರ್ಜಿಯನ್ನು ಸಲ್ಲಿಸಿರುತ್ತದೆ. ಪ್ರಕಟಣೆ ಕುರಿತು ಮಹಾರಾಷ್ಟ್ರ ರಾಜ್ಯದ

ಬೇಡಿಕೆಯನ್ನು ಬೆಂಬಲಿಸುತ್ತಾ ಕರ್ನಾಟಕ ರಾಜ್ಯವು ತನ್ನ ಉತ್ತರವನ್ನು ಸಲ್ಲಿಸಿರುತ್ತದೆ. ಕರ್ನಾಟಕ ರಾಜ್ಯದಿಂದ ಬೆಂಬಲಿಸಲ್ಪಟ್ಟ ಮಹಾರಾಷ್ಟ್ರದ ಈ ಮಧ್ಯಕಾಲೀನ ಅರ್ಜಿಯ ವಿಚಾರಣೆಯು ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಚಾರಣೆಗೆ ಬರಲಿದ್ದು, ಸದರಿ ಅರ್ಜಿಗಳು ಇತ್ಯರ್ಥವಾಗಬೇಕಾಗಿದೆ.

13. ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳು ಸರ್ವೋಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಿರುವ ವಿಶೇಷ ಅನುಮತಿ ಅರ್ಜಿಗಳು ದಿನಾಂಕ:30.01.2015ರಂದು ವಿಚಾರಣೆಯಾಗಿದ್ದು, ಕರ್ನಾಟಕ ರಾಜ್ಯವು ಕೌಂಟರ್ ಅಫಿಡೆವಿಟ್ ಸಲ್ಲಿಸಲು ಮೂರು ವಾರಗಳ ಕಾಲಾವಕಾಶವನ್ನು ಹಾಗೂ ತದನಂತರ ರಿಜಾಂಡರ್ ಅಫಿಡೆವಿಟ್‌ಗಳಿದ್ದಲ್ಲಿ ಅವುಗಳನ್ನು ಸಲ್ಲಿಸಲು ಎರಡು ವಾರಗಳ ಕಾಲಾವಕಾಶವನ್ನು ನಿಗದಿಪಡಿಸಲಾಗಿದೆ.

ಶ್ರೀ ಬಸವರಾಜ್ ಬೊಮ್ಮಾಯಿ:– ಈಗ ಇರುವಂಥ ಸ್ಥಿತಿಗತಿ ಹೇಳಿ ಬಿಟ್ಟರೆ ಸಾಕು.

ಅಧ್ಯಕ್ಷರು:– ನಿಮಗೂ ಗೊತ್ತು ಅವರಿಗೂ ಗೊತ್ತು.

ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):– ನಾಳೆ 25, 26, 27 ಕ್ಕೆ ಇದು Tribunal ಮುಂದೆ frame ಮಾಡಲಿಕ್ಕೆ 9 issues ನ್ನು ರೂಪಿಸಿದ್ದಾರೆ. ಈಗಾಗಲೇ ಇದು ಎರಡು ರಾಜ್ಯಗಳ ಮಧ್ಯೆ ಇರುವಂಥದ್ದು. ನಮ್ಮನ್ನು ಮತ್ತು ಮಹಾರಾಷ್ಟ್ರದವರನ್ನು ಕೂಡ ಸೇರಿಸಿಕೊಂಡು ಇದರಲ್ಲಿ issues frame ಮಾಡಿದ್ದಾರೆ. ಕೇಂದ್ರ ಸರ್ಕಾರದವರು ಕೂಡ ಈ ಮಧ್ಯೆ Tribunal ಗೆ ಪತ್ರ ಬರೆದಿದ್ದಾರೆ. ಅವರು ಹೇಳುತ್ತಾರೆ, ಕಣಿವೆ ರಾಜ್ಯಗಳಿಗೆ ಮಾಡಿರುವ ಯೋಜನಾವಾರು ಹಂಚಿಕೆಯಲ್ಲಿ ಯಾವುದೇ ಬದಲಾವಣೆ ಮಾಡದೇ ಉತ್ತರಾಧಿಕಾರ ರಾಜ್ಯಗಳ ಹಂಚಿಕೆ ಬಗ್ಗೆ ನ್ಯಾಯಾಧಿಕರಣವು ನಿರ್ಣಯ ತೆಗೆದುಕೊಳ್ಳಬೇಕಾಗಿದೆ, ಎಂದು ಸ್ಪಷ್ಟೀಕರಣ ನೀಡುತ್ತಾ, ಕೇಂದ್ರ

ಜಲ ಸಂಪನ್ಮೂಲ ಸಚಿವಾಲಯವು, ದಿನಾಂಕ:25–08–2014 ಕ್ಕೆ ಪತ್ರ ಬರೆದಿದೆ.

ಅಧ್ಯಕ್ಷರು:– ನೀವು ಒಂದು ಕೆಲಸ ಮಾಡುತ್ತೀರಾ?

ಶ್ರೀ ಎಂ.ಬಿ. ಪಾಟೀಲ್:– Yes sir.

ಅಧ್ಯಕ್ಷರು:– ಜಲಾನಯನ ಪ್ರದೇಶದ ಸದಸ್ಯರು ಯಾರು ಇದ್ದಾರೆ ಅವರ ಒಂದು ಸಭೆಯನ್ನು ಕರೆದು ಅವರ ಅಭಿಪ್ರಾಯ ತೆಗೆದುಕೊಂಡು ಆ ಪ್ರಕಾರವಾಗಿ ನೀವು tribunal ಗೆ ಸಲ್ಲಿಸಿ.

ಶ್ರೀ ಎಂ.ಬಿ. ಪಾಟೀಲ್:– ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದು, ಮಾನ್ಯ ಮುಖ್ಯಮಂತ್ರಿಗಳು ಇದಕ್ಕಾಗಿ ಒಂದು floor leaders meeting ಮಾಡುತ್ತಿದ್ದೇವೆ. ಈ floor leaders meeting ಮಾಡಿ, ಅಲ್ಲಿ strategize ಮಾಡಬೇಕು, ಏಕೆಂದರೆ, ಕೇಂದ್ರ ಸರ್ಕಾರ ಏನು ಪತ್ರ ಬರೆದಿದೆ, ಅದರ ಮೇಲೆ ನಾವು ಯಾವ ರೀತಿ ಮುನ್ನಡೆಯಬೇಕು ಎನ್ನುವುದನ್ನು floor leaders meeting ನಲ್ಲಿ ನಿರ್ಣಯ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು:– Ok. ಹಾಗೆ ಮಾಡಿ.

ಶ್ರೀ ಬಸವರಾಜ್ ಬೊಮ್ಮಾಯಿ:– ಒಂದು ನಿಮಿಷ. ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ. ತಾವು ಆ floor leaders meeting ನಲ್ಲಿ ತಾವೇನು ನಿರ್ಣಯ ಮಾಡಬೇಕೆನ್ನುವಂಥದ್ದು, ನೋಡಿ ಇಲ್ಲಿ issues ಏನು frame ಮಾಡಿದ್ದಾರೆ, ಏಕೆ ಈ ಪ್ರಶ್ನೆ ಬಂತೆಂದರೆ, Whether the scope of inquiry into the terms of reference under Section 89 of Andhra Pradesh Reorganization Act encompasses all the four States of Maharastra, Karnataka, Telegana and Andhra Pradesh or only the two successor States of Andhra Pradesh and Telangana? ಎಂಬ issue ಈಗ ಬಂದಿದೆ. ಈ issue ನಲ್ಲಿ ನಾವು ಸರಿಯಾದ ರೀತಿಯಲ್ಲಿ ವಾದವನ್ನು ಮಾಡದೆ ಇದ್ದರೆ ಹೇಗೆ?

ಅಧ್ಯಕ್ಷರು:– ಹಾಗಾದರೆ, ವಾದ ಮಾಡುವುದಕ್ಕೆ ನೀವೇ ಹೋಗಿಬಿಡಿ.

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಹಿತವನ್ನು ಹೇಳುವುದಕ್ಕೆ ನಮಗೆ ಅವಕಾಶ ಇಲ್ಲವೇ?

ಅಧ್ಯಕ್ಷರು:– ನೀವು ಸರ್ಕಾರವನ್ನು ನಡೆಸಿದ್ದೀರಿ ಹಾಗೆಯೇ ಆ ಇಲಾಖೆಯ ಜವಾಬ್ದಾರಿಯನ್ನು ಹೊತ್ತವರಾಗಿದ್ದೀರಿ. ಅಲ್ಲಿ ವಾದವನ್ನು ನೀವು ಹೋಗಿ ಮಾಡುತ್ತೀರಾ? ಅಲ್ಲಿ ಲಾಯರ್ ಒಬ್ಬರನ್ನು ಇಡುತ್ತೀರಿ, ಆತ ಹೋಗಿ ವಾದ ಮಾಡುತ್ತಾನೆ.

ಶ್ರೀ ಬಸವರಾಜ್ ಬೊಮ್ಮಾಯಿ:– ಟ್ರಿಬ್ಯೂನಲ್‌ನಲ್ಲಿ ಲಾಯರ್ ವಾದ ಮಾಡಿದ ಮೇಲೆ ಈ issue frame up ಆಗಿದೆ. ಇದರಿಂದ ನಮಗೆ ತೊಂದರೆ ಆಗಿದೆ.

ಅಧ್ಯಕ್ಷರು:– ಹಾಗಾದರೆ, ಹಿಂದಿನವರು ಏನು ಮಾಡಿದರು?

ಶ್ರೀ ಬಸವರಾಜ್ ಬೊಮ್ಮಾಯಿ:– ಅದೇ ವಿಷಯವನ್ನು ನಾನು ಕೇಳುತ್ತೀದ್ದೇನೆ.

ಅಧ್ಯಕ್ಷರು:– ನಾವು ಮಾಡಿದ್ದು ಅದೇನೇ ಈಗ ಇವರು ಮಾಡಿರುವುದು ಅದೇನೇ.

ಶ್ರೀ ಬಸವರಾಜ್ ಬೊಮ್ಮಾಯಿ:– ಈ ವಿಷಯ ಆ ಸಂದರ್ಭದಲ್ಲಿ ಬಂದಿರಲಿಲ್ಲ. ಈ ವಿಷಯ ಬಹಳ ಗಂಭೀರವಾಗಿದೆ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು:– ಸಾಕು ಬಿಡಿ.

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಈ ವಿಷಯ Reoganization Act ಇದ್ದರೂ ಕೂಡ.

(ಗೊಂದಲ)

ಅಧ್ಯಕ್ಷರು:– ಚರ್ಚೆ ಸಾಕು. ತಾವು ಮಾತನಾಡಿ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, Floor leaders meeting ನಲ್ಲಿ ಈ ಬಗ್ಗೆ ಚರ್ಚೆ ಮಾಡುತ್ತೇವೆ. ಇದು ಬಹಳ ಗಂಭೀರವಾದ ವಿಚಾರ ಇದೆ ಎಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಸಚಿವರೇ, ಇದನ್ನು ಬಹಳ ಹಗುರವಾಗಿ ತೆಗೆದುಕೊಳ್ಳಬೇಡಿ.

ಅಧ್ಯಕ್ಷರು:– ಮಾನ್ಯ ಬಾಲಕೃಷ್ಣರವರೇ, ತಾವು ಹೇಳಿ.

ಶ್ರೀ ಬಸವರಾಜ್ ಬೊಮ್ಮಾಯಿ:– ಎರಡು ರಾಜ್ಯಗಳ ಮಧ್ಯೆ ಹಂಚಿಕೆ ಮಾಡುವ ಬಗ್ಗೆ Reorganization Act ನಲ್ಲಿ ಬಹಳ ಸ್ಪಷ್ಟವಾಗಿದೆ. ಆದರೂ ಕೂಡ ಈ issue ಬಂದಿವೆ. ಇದರಂತೆ ಏನಾದರೂ ಆಜ್ಞೆ ಆದರೆ ಮತ್ತೆ ನಮ್ಮ ಟ್ರಿಬ್ಯುನಲ್ 30 ವರ್ಷ ಹಿಂದೆ ಹೋಗಬೇಕಾಗುತ್ತದೆ. ನಾವು ಈಗಾಗಲೇ ಪಡೆದುಕೊಂಡಿರುವುದೆಲ್ಲವನ್ನೂ ಕಳೆದುಕೊಳ್ಳತಕ್ಕಂಥ ಪರಿಸ್ಥಿತಿ ಬರುತ್ತದೆ. ಅದರ ಬಗ್ಗೆ ತಾವು ಎಚ್ಚರಿಕೆಯನ್ನು ವಹಿಸಬೇಕು ಹಾಗೆಯೇ ನಿಮ್ಮ law team ಗೆ ಎಚ್ಚರಿಕೆಯನ್ನು ಕೊಡಬೇಕು.

ಅಧ್ಯಕ್ಷರು:– ಅಲ್ಲಿ argument ಮಾಡುವುದಕ್ಕೆ ಅವರನ್ನು ಕರೆದುಕೊಂಡು ಹೋಗಿ.

ಶ್ರೀ ಎಂ.ಬಿ. ಪಾಟೀಲ್:– ರಾಜ್ಯದ ಹಿತದೃಷ್ಟಿಯಿಂದ Floor leaders meeting ನಲ್ಲಿನ ಎಲ್ಲರ ಸಲಹೆ ಸೂಚನೆ ಮೇರೆಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿದ್ದೇವೆ.

ಅಧ್ಯಕ್ಷರು:– ಆಯಿತು. ಮಾನ್ಯ ಸಿ.ಎನ್. ಬಾಲಕೃಷ್ಣರವರೇ, ತಾವು ಮಾತನಾಡಿ. ಅವರು ಇಲ್ಲ ಈಗ ಮುಂದಿನ ವಿಷಯಕ್ಕೆ ಹೋಗೋಣ. ಮುಂದಿನದು ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರದು ಇದೆ. ಅವರೂ ಸಹ ಇಲ್ಲ. ಮುಂದಿನ ಮಾನ್ಯ ರಮೇಶ್ ಕುಮಾರ್‌ರವರದು ಇದೆ. ತಾವು ಮಾತನಾಡಿ.